**ಪಿ.ಡಬ್ಲ್ಯು-02**

**ಸಾಕ್ಷಿಯನ್ನು ದಿನಾಂಕಃ 27.03.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ 3 ಮತ್ತು 4 ನೇ ಪ್ರತಿವಾದಿಗಳ ಪರ ಶ್ರೀ ಹೆಚ್.ಎಂ.ಸಿ, ವಕೀಲರಿಂದಃ**

ದಾವಾ ಸ್ವತ್ತನ್ನು ಹೊರತುಪಡಿಸಿ ನರಸಿಂಹಯ್ಯರವರ ಹೆಸರಿನಲ್ಲಿ ಇತರೆ ಆಸ್ತಿಗಳು ಇರುತ್ತವೆ. ಉಳಿಕೆ ಆಸ್ತಿಗಳ ಪೈಕಿ ಸರ್ವೆ ನಂ. 253 ರಲ್ಲಿರುವ 2 ಎಕರೆ 14 ಗುಂಟೆ ಜಮೀನು ಮತ್ತು 254/1 ರಲ್ಲಿರುವ 1 ಎಕರೆ 7 ಗುಂಟೆ ಜಮೀನು ಹಾಗು 325/1 ರಲ್ಲಿರುವ 2 ಎಕರೆ 39 ಗುಂಟೆ ಜಮೀನು 1 ಮತ್ತು 2 ನೇ ಪ್ರತಿವಾದಿಗಳ ಹೆಸರಿನಲ್ಲಿರುತ್ತದೆ. ಈ ಮೇಲೆ ಹೇಳಿದ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ. ನನ್ನ ತಾತನ ಆಸ್ತಿ ನಮಗೆ ಬರಬೇಕೆಂದು ದಾವೆ ಸಲ್ಲಿಸಿರುತ್ತೇನೆ. ಮೃತ ಗಿಡ್ಡಮ್ಮರವರಿಗೆ ಜಯಮ್ಮ ಎಂಬ ಸಹೋದರಿ ಇದ್ದು, ಅವರು ಮೃತಪಟ್ಟಿರುತ್ತಾರೆ, ಅವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಅವರನ್ನು ಈ ದಾವೆಯಲ್ಲಿ ಸೇರಿಸಲು ಯಾವುದೇ ತೊಂದರೆ ಇರಲಿಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ಯಾವ ಉದ್ದೇಶಕ್ಕಾಗಿ 3 ಮತ್ತು 4 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಕುಟುಂಬದ ಕಾನೂನುಬದ್ಧ ಅವಶ್ಯಕತೆಗಾಗಿ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿರುವುದರಿಂದ ನಾನು ಯಾವುದೇ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**

**ನಂಜನಗೂಡು.**